**<u>ಮಧ್ಯಂತರ ಅರ್ಜಿ ಸಂಖ್ಯೆಃ 2 ರ ಮೇಲಿನ ಆದೇಶಃ</u>**

ಮಾನ್ಯ ವಾದಿ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ3 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10 ಸಹವಾಚಕ ಕಲಂ.151 ರಡಿಯಲ್ಲಿ ಸಲ್ಲಿಸಿ ಉದ್ದೇಶಿತ ಪ್ರತಿವಾದಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆಮಾಡಬೇಕೆಂದು ಕೋರಿರುತ್ತಾರೆ.

ಉದ್ದೇಶಿತ ಪ್ರತಿವಾದಿಗಳು

1. ಮುಖ್ಯ ಕಾರ್ಯದರ್ಶಿಗಳು,
   ಕರ್ನಾಟಕ ಸರ್ಕಾರ, ವಿಧಾನ ಸೌಧ,
   ಬೆಂಗಳೂರು - 01.

2. ಜಿಲ್ಲಾಧಿಕಾರಿಗಳು,
   ರಾಮನಗರ ಜಿಲ್ಲೆ.

3. ಪೊಲೀಸ್ ಸಬ್ ಇನ್ಸ್ ಪೆಕ್ಟರ್,
ಚನ್ನಪಟ್ಟಣ ಪುರ ಠಾಣೆ,
ಚನ್ನಪಟ್ಟಣ ಟೌನ್, ಚನ್ನಪಟ್ಟಣ.

2. ವಾದಿಯು ಈ ಮಧ್ಯಂತರ ಅರ್ಜಿಯ ಜೊತೆಗೆ ಶಪಥ ಪತ್ರವನ್ನು ಪ್ರಮಾಣೀಕರಿಸಿ ಸಲ್ಲಿಸಿದ್ದು, ಅದರಲ್ಲಿ ಕಾರಣಗಳನ್ನು ತಿಳಿಸಿರುತ್ತಾರೆ. ಸದರಿ ದಾವೆಯನ್ನು ಪ್ರತಿವಾದಿಗಳ ವಿರುದ್ದ ದಾವಾ ಸ್ವತ್ತಿನ ಸಂಬಂಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ಪ್ರತಿವಾದಿಗಳ ವಿರುದ್ದ ದಾವೆ ಸಲ್ಲಿಸಿದ್ದು, ಸದರಿ ದಾವೆಯನ್ನು ಈಗಾಗಲೇ 1, 2 ನೇ ಪ್ರತಿವಾದಿಗಳ ವಿರುದ್ದ ದಾವೆ ಸಲ್ಲಿಸಿರುತ್ತೇನೆ. ಆದರೆ ಸೂಚಿತ ವ್ಯಕ್ತಿಗಳು 1, 2 ನೇ ಪ್ರತಿವಾದಿಗಳ ಮೇಲಾಧಿಕಾರಿಗಳು ಆಗಿದ್ದು ಈ ಸಂಬಂಧ ಸದರಿ ಸೂಚಿತ ವ್ಯಕ್ತಿಗಳು ಅವರ ಆದೇಶ ಪರಿಪಾಲಕರಾಗಿರುತ್ತಾರೆ ಮತ್ತು ಸದರಿ ಸೂಚಿತ ವ್ಯಕ್ತಿಗಳು/ಸಂಸ್ದೆಯು 1, 2 ನೇ ಪ್ರತಿವಾದಿಗಳನ್ನು ಒಳಗೊಂಡಂತೆ ಒಂದು ಪರಿಪೂರ್ಣವಾದ ಅಂಗವಾಗಿರುತ್ತದೆ. ಆದ್ದರಿಂದ ಸದರಿ ದಾವೆಯ ವಸ್ತು ಸಂಗತಿ ಒಂದು ವ್ಯಾಜ್ಯವಾಗಿದ್ದು ಇದರ ಮೇಲಿನ ಆದೇಶವು ಪರಿಪೂರ್ಣವಾಗಬೇಕಾದಲ್ಲಿ ಸದರಿ ವ್ಯಕ್ತಿಗಳು ಈ ದಾವೆಯಲ್ಲಿ ಅವಶ್ಯ ಪಕ್ಷಕಾರರಾಗಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿರುತ್ತಾರೆ.

3. ಉದ್ದೇಶಿತ ಪ್ರತಿವಾದಿಗಳ ಮಾನ್ಯ ಸರ್ಕಾರಿ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು, ಆದರೆ ಸಾಕಷ್ಟು ಕಾಲಾವಕಾಶ ನೀಡಿದರು ಸಹ ಮಧ್ಯಂತರ ಅರ್ಜಿ ಸಂಖ್ಯೆಃ 3 ಕ್ಕೆ ತಕರಾರು ಸಲ್ಲಿಸಿರುವುದಿಲ್ಲ.

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

**<u>ಃಅಂಶಗಳುಃ</u>**

1. **ಉದ್ದೇಶಿತ ಪ್ರತಿವಾದಿಗಳು ಈ ದಾವೆಗೆ ಅವಶ್ಯಕ ಪಕ್ಷಗಾರರೇ?**

2. **ಮಾಡುವ ಆದೇಶ ಏನು?**

5. ವಾದಿ ಪರ ವಕೀಲರ ವಾದವನ್ನು ಆಲಿಸಲಾಯಿತು. ಉದ್ದೇಶಿತ ಪ್ರತಿವಾದಿಗಳು ಮತ್ತು ಸರ್ಕಾರಿ ವಕೀಲರು ಗೈರು ಹಾಜರಾಗಿರುತ್ತಾರೆ.

6. ಈ ನ್ಯಾಯಾಲಯವು ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

**ಅಂಶ ಸಂಖ್ಯೆ1 : ನಕಾರಾತ್ಮಕವಾಗಿ**
**ಅಂಶ ಸಂಖ್ಯೆ2 : ಅಂತಿಮ ಆದೇಶದಂತೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,**

## ಕಾರಣಗಳು

7. **ಅಂಶ ಸಂಖ್ಯೆ:1:** ವಾದಿಯು ಪ್ರತಿವಾದಿಯ ವಿರುದ್ದ ಈ ದಾವೆಯನ್ನು ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ಸದರಿ ಮಧ್ಯಂತರ ಅರ್ಜಿಯಲ್ಲಿ ಪ್ರಸ್ತಾಪಿತ ಪ್ರತಿವಾದಿಗಳನ್ನು ಈ ದಾವೆಗೆ ಸೇರ್ಪಡೆ ಮಾಡಬೇಕೆಂದು ಕೋರಿರುತ್ತಾರೆ.

8. ಈ ದಾವೆಯನ್ನು ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿದ್ದು ವ್ಯಾಜ್ಯ ಕಾರಣವು ವಾದ ಪತ್ರದ ಪ್ರಕಾರ ಪ್ರತಿವಾದಿಯ ವಿರುದ್ಧ ಮಾತ್ರ ಇರುತ್ತದೆ. ಉದ್ದೇಶಿತ ಪ್ರತಿವಾದಿಗಳು ಯಾವ ರೀತಿ ವಾದಿಯ ಸ್ವಾಧೀನಕ್ಕೆ ಅಡಚಣೆ ಉಂಟುಮಾಡುತ್ತಿರುತ್ತಾರೆಂದು ವಾದಿಯು ತನ್ನ ಅರ್ಜಿಯಲ್ಲಿ ಸ್ಪಷ್ಟವಾಗಿ ವಿವರಿಸಿರುವುದಿಲ್ಲ. ಅದೇ ರೀತಿ ಪ್ರಸ್ತಾಪಿತ ಪ್ರತಿವಾದಿಗಳು ಸರ್ಕಾರದ ಅಧಿಕಾರಿಗಳಾಗಿದ್ದು ಅವರಿಗೆ ದಾವಾ ಪೂರ್ವ ನೋಟೀಸನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.80(1)ರಡಿಯಲ್ಲಿ ನೀಡಬೇಕಾಗಿರುತ್ತದೆ. ಆದರೆ ಸದರಿ ನೋಟೀಸನ್ನು ವಾದಿಯು ನೀಡದೇ ಇರುವುದು ಕಂಡುಬರುತ್ತದೆ. ಈ ದಾವೆಯನ್ನು ಪರಿಪೂರ್ಣವಾಗಿ ತೀರ್ಮಾನ ಮಾಡಲು ಉದ್ದೇಶಿತ ಪ್ರತಿವಾದಿಗಳ ಹಾಜರಾತಿ ಅವಶ್ಯಕವಾಗಿರುವುದಿಲ್ಲವೆಂದು ಈ ನ್ಯಾಯಾಲಯವು ತೀರ್ಮಾನಕ್ಕೆ ಬಂದಿರುತ್ತದೆ. ಈ ಎಲ್ಲಾ ಕಾರಣಗಳಿಂದ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಪುರಸ್ಕಾರಗೊಳ್ಳಲು ಯೋಗ್ಯವಾಗಿರುವುದಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟು **ಅಂಶ ಸಂಖ್ಯೆ:1 ನ್ನು ನಕಾರಾತ್ಮಕವಾಗಿ ಉತ್ತರಿಸಿದೆ.**

9. **ಅಂಶ ಸಂಖ್ಯೆ:2:-** ಈ ಮೇಲ್ಕಂಡ 1 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## ಆದೇಶ

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1**

os.no. 144.2020

**ನಿಯಮ 10 ಸಹವಾಚಕ ಕಲಂ.151 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃ 3 ನ್ನು ರೂ.200/- ಗಳ ಖರ್ಚಿನೊಂದಿಗೆ ವಜಾಗೊಳಿಸಲಾಗಿದೆ.**

**Call on 19.06.2023.**

**(ಉಷಾರಾಣಿ ಬಿ.ಎನ್)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ. ಎಫ್? ಸಿ., ಚನ್ನಪಟ್ಟಣ.**